



ಇನ್ನೊಂದು ಬಣ್ಣವನ್ನು ಬದಿಗೆ ತಳ್ಳಿ ಆಫ್ರಿಕಾಕ್ಕೆ ಹೋಗುವುದೆಂದರೆ, ಆ ಬಣ್ಣವನ್ನು ಇನ್ನೂ ನಾಲ್ಕೈದು ವರ್ಷ ಮರೆತಂತಾಗುತ್ತಿತ್ತು.

ಆ ಬಣ್ಣ ಭಾವಿ ಪತ್ನಿ ಗುಲಾಬಳಾಗಿದ್ದಳು.

ಆರು

ಹದಿನೈದುಹದಿನಾರರ ಯುವಕ ಹರಿಲಾಲ ತನ್ನ ಭಾವಿ ಪತ್ನಿ ಗುಲಾಬಳನ್ನು ಮೊದಲ ಬಾರಿಗೆ ನೋಡಿದಾಗ, ಅವನು ಜೀವನ ಮತ್ತು ಸಾವಿನ ನಡುವೆ ಇಬ್ಬದಿಯಲ್ಲಿ ನಿಂತಿದ್ದ. ಅವನು ಕಾಯಿಲೆಯಿಂದಾಗಿ ಹಾಸಿಗೆಯಲ್ಲಿ ಮಲಗಿದ್ದ; ಅನೇಕ ದಿನಗಳು ಹಾಸಿಗೆಯಲ್ಲಿಯೇ ಮಲಗಿದ್ದರಿಂದ ಸುಮಾರಾಗಿ ಅವನು ಮೂರ್ಛಾವಸ್ಥೆಯಲ್ಲಿರುವಂತೆ ತೋರುತ್ತಿತ್ತು. ಆದರೆ ಅವನು ಇದಕ್ಕೂ ಮೊದಲು ಗುಲಾಬಳನ್ನು ಒಮ್ಮೆ ಮಾತ್ರ ನೋಡಿದ್ದ. ಆಗ ಅವನು ಕೇವಲ ಹದಿಮೂರುಹದಿನಾಲ್ಕರ ವಯಸ್ಸಿನವನಾಗಿದ್ದ. ಅವನು ಮೊದಲ ಬಾರಿಗೆ ನೋಡಿದ ಗುಲಾಬ ಮತ್ತು ಆಗಿನ ಘಟನೆಯನ್ನು ನೆನೆದು ಈಗಲೂ ಸಹ ಹರಿಲಾಲನಿಗೆ ರೋಮಾಂಚನವಾಗುತ್ತಿತ್ತು.

ಬಾಬಾಪೂ ಮತ್ತು ಸಹೋದರ ಎಂದೋ ಆಫ್ರಿಕಾಕ್ಕೆ ಹೋಗಿದ್ದರು. ಹರಿಲಾಲ, ಬಾಪೂ ಅವರ ಅಣ್ಣ ಲಕ್ಷ್ಮೀದಾಸ್ ಮತ್ತು ಗೋಕಿ ಸೋದರತ್ತೆಯ ಮೇಲ್ವಿಚಾರಣೆಯಲ್ಲಿರುತ್ತಾ ರಾಜಕೋಟದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ. ಲಕ್ಷ್ಮೀದಾಸ್ ದೊಡ್ಡಪ್ಪ ಹರಿಲಾಲನನ್ನು ತಮ್ಮ ಮಗನೆಂದೇ ತಿಳಿದಿದ್ದರು, ಆದರೂ ಹರಿಲಾಲನಿಗೆ ಒಂಟಿತನ ಕಾಡುತ್ತಿತ್ತು. ಒಂಟಿತನದ ಆ ದಿನಗಳಲ್ಲಿ ಅದೊಂದು ದಿನ

ಹರಿಲಾಲನ ತಲೆಗೆ ಜರಿಯ ಟೋಪಿಯನ್ನು ಹಾಕಲಾಯಿತು. ರೇಶ್ಮೆ ನಿಲುವಂಗಿ ಮತ್ತು ಕೆಂಪು ಅಂಚಿನ ಮರ್ಸರೈಸ್ಡ್ ಧೋತರವನ್ನು ಉಡಿಸಲಾಯಿತು. ಹಣೆಗೆ ಕೆಂಪು ತಿಲಕವನ್ನಿಡಲಾಯಿತು; ಅದರ ಮೇಲೆ ಅಕ್ಷತೆಯನ್ನು ಹಚ್ಚಲಾಯಿತು. ದೊಡ್ಡಪ್ಪ, ಗೋಕಿ ಸೋದರತ್ತೆ ಮತ್ತು ಇನ್ನಿತರರು ಸೇರಿ ಹರಿಲಾಲನ ವಿವಾಹವನ್ನು ನೆರವೇರಿಸಿದರು. ಮಾವ ಅಳಿಯನ ಕೈಯಲ್ಲಿ ತೆಂಗಿನಕಾಯಿಯನ್ನಿಟ್ಟರು. ಅವನಿಗೆ ರಾಣಿ ವಿಕ್ಟೋರಿಯಾ ಭಾವಚಿತ್ರವಿದ್ದ ಬೆಳ್ಳಿಯ ಅಸಲಿ ನಾಣ್ಯವನ್ನ ಕೊಟ್ಟು, ಹೆಗಲಿಗೆ ಜೋಡಿ ಶಾಲನ್ನು ಹೊದಿಸಲಾಯಿತು.

ನನ್ನ ಮದುವೆಯಾಗುತ್ತಿದೆ ಎಂದು ಹರಿಲಾಲನಿಗೆ ರೋಮಾಂಚನವಾಗುತ್ತಿತ್ತು. ತನ್ನ ಭಾವಿ ಪತ್ನಿಯ ಹೆಸರು ಗುಲಾಬ ಎಂದಷ್ಟೇ ಅವನಿಗೆ ತಿಳಿದಿತ್ತು. ಆಗ ಗುಲಾಬಳನ್ನು ನೋಡುವ ತೀವ್ರ ಇಚ್ಛೆಯಿತ್ತು, ಆದರೆ ಅದನ್ನು ಯಾರಿಗೆ ಹೇಳುವುದೆಂದು ಅವನಿಗೆ ಹೊಳೆಯುತ್ತಿರಲಿಲ್ಲ. ದೊಡ್ಡಪ್ಪ ಮತ್ತು ಗೋಕಿ ಸೋದರತ್ತೆಯವರ ನಡುವೆ ಆ ವೇಳೆಯಲ್ಲಿ ನಡೆದ ಮಾತುಕತೆ ಹರಿಲಾಲನಿಗೆ ಚೆನ್ನಾಗಿ ನೆನಪಿತ್ತು.

'ಮೋಹನದಾಸನಿಗೆ ಒಂದೆರಡು ಪತ್ರಗಳನ್ನು ಬರೆದು ಕೇಳಿದ್ದರೆ ಚೆನ್ನಾಗಿತ್ತು.' ಗೋಕಿ ಸೋದರತ್ತೆ ಹೇಳಿದ್ದರು.

'ಗೋಕಿ,' ದೊಡ್ಡಪ್ಪ ದರ್ಪದ ಧ್ವನಿಯಲ್ಲಿ ಹೇಳಿದ್ದರು, 'ಕಳೆದ ವರ್ಷ ಮೋಹನದಾಸ ಇಲ್ಲಿಗೆ ಬಂದಾಗ, ನಮ್ಮೆದುರೇ ಮಾತನಾಡಿದ್ದೆವು. ಮಗನ ವಿವಾಹ ನಿಶ್ಚಿತಾರ್ಥವಾದರೆ ತಂದೆಯ ಆಕ್ಷೇಪ ಏನಿರುವುದು? ಮತ್ತೆ ವೋರಾ ಅಂಥ ವಂಶದಲ್ಲಿ ಬೀಗರು ಸಿಗುವುದು ಏನು ಕಡಿಮ ವಿಷಯವೇ!'

'ಅದಂತೂ ಹೌದು...ಆದರೆ ಕಸ್ತೂರಬಾ ಅತ್ತಿಗೆಯವರ ಕಿವಿಗೆ ಈ ವಿಷಯ ಬಿದ್ದಿದ್ದರೆ ಸರಿಯಿತ್ತು...'

'ಇರಲಿ ಬಿಡು, ಗೋಕಿ. ನೀನು ಈ ಹೊಸ ಕಾಲಕ್ಕೆ ಅದೆಲ್ಲಿಂದ ಬಂದೆ! ಮನೆಯಲ್ಲಿ ಇಷ್ಟೊಂದು ಜನ ಗಂಡಸರು ಇರುವಾಗ, ಸೊಸೆಹೆಣ್ಣು ಮಕ್ಕಳನ್ನು ಕೇಳುವ ಅಗತ್ಯವೇನಿದೆ? ನಮ್ಮ ಹರಿಲಾಲ ತುಂಬಾ ಅದೃಷ್ಟವಂತ; ಇನ್ನು ಗುಲಾಬಳನ್ನು ಕಸ್ತೂರಬಾ ಸೊಸೆ ಬಾಲ್ಯದಲಿಯೇ ನೋಡಿಟ್ಟಿದ್ದಾಳೆ.'

ಸರಿ, ಮಾತುಕತೆ ಪೂರ್ಣವಾಯಿತು. ಗುಲಾಬಳಂಥ ಹೆಂಡತಿಯನ್ನು ಪಡೆಯಲು ದೊಡ್ಡಪ್ಪ ಅವನನ್ನು ಅದೃಷ್ಟವಂತನೆಂದು ತಿಳಿದಿದ್ದರು. ಆ ಗುಲಾಬಳನ್ನು ನೋಡಲು ಹರಿಲಾಲನ ಮನಸ್ಸಿನ ಆವೇಗ ಹೆಚ್ಚುತ್ತಲೇ ಇತ್ತು. ಅತ್ತೆಮನೆಯಿಂದ ಹಾದು ಹೋಗುವ ಸಂದರ್ಭ ಒದಗಿ ಬಂದಾಗ ಅಲ್ಲಿ ಹರಿಲಾಲನ ಕಾಲುಗಳು ಮಂದಗತಿಯಲ್ಲಿ ಸಾಗುತ್ತಿದ್ದವು. ಅಲ್ಲಿ ನಿಂತು ದೂರದಿಂದಲೇ ನೋಡಲು ಪ್ರಯತ್ನಿಸುತ್ತಿದ್ದ. ನಂತರ ನಗುತ್ತಾ, 'ಅಯ್ಯೋ ದೇವರೇ, ರಸ್ತೆಯಲ್ಲಿ ಇಂಥ ಅನೇಕ ಹುಡುಗಿಯರು ಬಂದುಹೋಗುತ್ತಾರೆ. ಇವರಲ್ಲಿ ಗುಲಾಬ ಯಾರು ಎನ್ನುವುದು ಹೇಗೆ ತಿಳಿಯುವುದು?' ಎಂದು ಯೋಚಿಸುತ್ತಿದ್ದ.

ಗೋಕಲದಾಸ ಇದನ್ನು ಪರಿಚಯಿಸಿದ. ಗೋಕಿ ಸೋದರತ್ತೆಯ ಹಿರಿಯ ಮಗ ಗೋಕಲದಾಸ ಹರಿಲಾಲನ ವಯಸ್ಸಿನವನೇ ಆಗಿದ್ದ. ಹರಿಲಾಲನನ್ನು ಗೇಲಿ ಮಾಡುವ ಉದ್ದೇಶದಿಂದ ಒಮ್ಮೆ ಅವನು ಗುಲಾಬಳ ಮನೆಯ ಗೋಡೆಯಲ್ಲಿ ತೂಗಾಡುತ್ತಿದ್ದ ಫ್ರೇಮಿನಲ್ಲಿದ್ದ ಚಿತ್ರವೊಂದನ್ನು ಕಳಚಿ ತಂದ. ಆ ಫೋಟೋದಲ್ಲಿ ಹರಿಲಾಲನ ಮಾವನ ಮನೆಯವರೆಲ್ಲರೂ ಕೂತಿದ್ದರು. ಬಾಲಕಿ ಗುಲಾಬ ತನ್ನ ತಂದೆತಾಯಿಯ ನಡುವೆ ಒಂದು ಎತ್ತರದ ಕುರ್ಚಿಯಲ್ಲಿ ಸೆಟೆದು ಕೂತಿದ್ದಳು. ಅವಳ ಕೈಯಲ್ಲಿ ಹೂವಿತ್ತು, ಕೊರಳಿನಲ್ಲಿ ಹಾರವಿತ್ತು. ಹರಿಲಾಲನಿಗೆ ಆ ಕ್ಷಣದ ನೆನಪಾಯಿತು.

ಅವನು ಮುಗ್ಧಭಾವನೆಯಿಂದ ಫ್ರೇಮ್ ಹಾಕಿಸಿದ ಆ ಫೋಟೋದಲ್ಲಿ ತನ್ನ ಪರಿವಾರದವರೊಂದಿಗೆ ಕೂತ ಆ ಕೋಮಲ ಬಾಲಕಿಯನ್ನು ನೋಡುತ್ತಿದ್ದ. ಅವಳೂ ಸಹ ಹರಿಲಾಲನನ್ನು ನೋಡುತ್ತಾ ಕಣ್ಣುಗಳನ್ನು ಮಿಟುಕಿಸಿದಂತೆ ತೋರುತ್ತುತ್ತು. ಆದರೆ ಆ ಫೋಟೋದರ್ಶನ ಸಹ ಹೆಚ್ಚು ದಿನ ನಡೆಯಲಿಲ್ಲ. ಗೋಕಲದಾಸ ಆ ಫೋಟೋವನ್ನು ಯಾರ ಗಮನಕ್ಕೂ ತರದೆ, ಕದ್ದುಮುಚ್ಚಿ ತಂದಿದ್ದ. ಯಾರಿಗೂ ಗೊತ್ತಾಗುವುದಕ್ಕೆ ಮೊದಲೇ ಅದನ್ನು ಗೋಡೆಗೆ ಅದೇ ಜಾಗದಲ್ಲಿ ಹಾಕಬೇಕಿತ್ತು. ಒಂದು ವೇಳೆ ಈ 'ಚಿತ್ರಹರಣ'ದ ವಿಷಯ ತಿಳಿದರೆ, 'ಅನಿರುದ್ಧ ಹರಣ'ದ ವೇಳೆಯಲ್ಲಿ ದ್ವಾರಕೆಯ ಕೃಷ್ಣನ ಮನೆಯಲ್ಲಿ ಸಂಭವಿಸಿದ್ದ ಉಲ್ಕಾಪಾತಕ್ಕಿಂತಲೂ ಹೆಚ್ಚು ಕೋಲಾಹಲ ಎರಡೂ ಪರಿವಾರಗಳಲ್ಲಿ ಉದ್ಭವಿಸುತ್ತದೆ ಎಂಬುದು ತಿಳಿದಿತ್ತು.

ಗೋಕಲದಾಸ ಹರಿಲಾಲನ ಮುಗ್ಧತೆಯನ್ನು ಕಂಡು ಮನಸಾರೆ ಗೇಲಿ ಮಾಡಿದ, ನಂತರ ಫೋಟೋವನ್ನು ಮರೆಯಲ್ಲಿ ಹಿಡಿದುಕೊಂಡು ವೇಗವಾಗಿ ಹೊರಗೋಡಿದ. ಅಂಗಿಯ ಮರೆಯಲ್ಲಿ ಫೋಟೋವನ್ನು ಅಡಗಿಸಿಟ್ಟಕೊಂಡು ಓಡಿ ಹೋಗುತ್ತಿದ್ದ ಗೋಕಲದಾಸನ ಬೆನ್ನಿನೆಡೆಗೆ ಹರಿಲಾಲ ನೋಡುತ್ತಿದ್ದ.

ಚಿತ್ರದಲ್ಲಿ ನೋಡಿದ್ದ ಗುಲಾಬಳ ಮುಖವನ್ನು, ಕಾಯಿಲೆಯಿಂದಾಗಿ ಹಾಸಿಗೆಯಲ್ಲಿ ಮಲಗಿರುತ್ತಿದ್ದ ಹರಿಲಾಲ ಅದೆಷ್ಟೋ ತಿಂಗಳುಗಳ ನಂತರ ನೋಡಿದ್ದ. ಅರೆಪ್ರಜ್ಞಾವಸ್ಥೆಯಲ್ಲಿ ಜ್ವರದಿಂದ ಬಳಲುತ್ತಿದ್ದಾಗ ಹರಿಲಾಲ ತನ್ನ ತಲೆಯ ಬಳಿ ನಿಂತಿದ್ದ ಗುಲಾಬಳನ್ನು ನೋಡಿದೊಡನೆಯೇ ಗುರುತಿಸಿದ್ದ. ಹರಿಲಾಲನಿಗೆ ವಿಚಿತ್ರವೆಂದು ತೋರುತ್ತಿತ್ತು. ತಾನು ಇಂಥ ವೇಳೆಯಲ್ಲಿ ಗುಲಾಬಳನ್ನು ಹೇಗೆ ಗುರುತಿಸಿದ್ದೆ? ತಾನು ರೋಗಿಯಾಗಿ ಹಾಸಿಗೆಯಲ್ಲಿ ಮಲಗಿದ್ದ ಆ ದಿನಗಳಲ್ಲಿ ಗುಲಾಬ ತನಗೆ ಮಾಡಿದ್ದ ಸೇವೆಯನ್ನು ನೆನೆದು ಹರಿಲಾಲ ಭಾವಾವೇಶಕ್ಕೊಳಗಾಗುತ್ತಿದ್ದ. 'ಭೂಮಿ ಚಂದಿರನನ್ನು ನಿರೀಕ್ಷಿಸುವಂತೆ ನಾನು ನಿಮ್ಮನ್ನು ನಿರೀಕ್ಷಿಸುತ್ತೇನೆ ಎಂದು ಗುಲಾಬ ಹೇಳಿದ್ದಳು. ಈ ಮಾತನ್ನು ಸ್ಮರಿಸಿಕೊಂಡು ಅವನು ಸ್ನೇಹದಲ್ಲಿ ಮುಳುಗುತ್ತಿದ್ದ.

'ಹರಿಲಾಲ, ಈಗ ನೀನೂ ಸಹ ಆಫ್ರಿಕಾಕ್ಕೆ ಬಾ' ಎಂದು ದಕ್ಷಿಣ ಆಫ್ರಿಕಾದಿಂದ ಬಾಪೂ ಅವರ ಕರೆ ಬಂದಾಗ, ಒಂದು ಕಡೆ ಅವನ ಮನಸ್ಸು ಕುಣಿದು ಕುಪ್ಪಳಿಸಿತು; ಅದೇ ಇನ್ನೊಂದು ಕಡೆ ಗುಲಾಬಳ ಆಕರ್ಷಣೆ ಅವಳೆಡೆಗೆ ಸೆಳೆಯುತ್ತಿತ್ತು. ಆಫ್ರಿಕಾಕ್ಕೆ ಹೋಗುವುದೆಂದರೆ ದೀರ್ಘ ಅವಧಿಯವರೆಗೆ ಗುಲಾಬಳ ವಿರಹದಲ್ಲಿ ಕಳೆಯಬೇಕು. 'ನಾನು ನಿಮ್ಮನ್ನು ನಿರೀಕ್ಷಿಸುತ್ತೇನೆ' ಎಂದಿದ್ದ ಗುಲಾಬಳ ಮುಖದಲ್ಲಿದ್ದ ಆಗಿನ ಭಾವನೆ ಹರಿಲಾಲನನ್ನು ಅಸಹಾಯಕನನ್ನಾಗಿ ಮಾಡುತ್ತಿತ್ತು. ಅವನು ಆಫ್ರಿಕಾಕ್ಕೂ ಹೋಗಬೇಕಿತ್ತು, ಅಲ್ಲದೆ ಗುಲಾಬಳನ್ನು ನಡುವೆ ಬಿಟ್ಟು ಹೋಗುವಂತೆಯೂ ಇರಲಿಲ್ಲ.

ಅಳಿಯ ಆಫ್ರಿಕಾಕ್ಕೆ ಹೋಗಲು ಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವ ವಿಷಯ ತಿಳಿದು ಮಾವ, ದೊಡ್ಡಪ್ಪನಿಗೆ ಹೇಳಿದರು, 'ಲಕ್ಷ್ಮೀದಾಸ್ ಭೈಯ್ಯಾ, ಕನ್ಯೆಯನ್ನು ಅವಳ ವಿವಾಹದ ವಯಸ್ಸಿನಲ್ಲಿಯೇ ಮಾವನ ಮನೆಗೆ ಕಳುಹಿಸುವುದು ಬುದ್ಧಿವಂತಿಕೆಯಾಗಿದೆ. ಹರಿಲಾಲ ಆಫ್ರಿಕಾಕ್ಕೆ ಹೋಗುವುದಕ್ಕೆ ಮೊದಲೇ ಇಬ್ಬರ ವಿವಾಹವಾದರೆ, ತುಂಬಾ ಒಳ್ಳೆಯದು.'

'ಬೀಗರೇ, ನಿಮ್ಮ ಮಾತು ನೂರಕ್ಕೆ ನೂರು ಸತ್ಯ.' ದೊಡ್ಡಪ್ಪ ವಿವಾಹದ ಈ ಪ್ರಸ್ತಾಪಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾ ಹೇಳಿದರು, 'ಆಫ್ರಿಕಾ ನಮಗೆ ಭೂಮಿಯ ಇನ್ನೊಂದು ತುದಿಯಂತೆ. ಹರಿಲಾಲ ಅಲ್ಲಿಗೆ ಹೋದ ನಂತರ, ಯಾವಾಗ ಮರಳಿ ಬರುವನೋ ಎಂಬುದು ದೇವರ ಇಚ್ಛೆಯಾಗಿದೆ.'